4. ವಿಷಯ: ಮಾಲೂರಿನ ಬೆಸ್ಕಾಂ ಕಛೇರಿಯ ದಿನಗೂಲಿ ನೌಕರ ಆಕಸ್ಮಿಕ ಮರಣ ಹೊಂದಿದ್ದು ಪರಿಹಾರ ನೀಡುವ ಬಗ್ಗೆ.

ಶ್ರೀ ಕೆ.ಎಸ್. ಮಂಜುನಾಥಗೌಡ (ಮಾಲೂರು):– ಮಾನ್ಯ ಅಧ್ಯಕ್ಷರೆ, ಮಾಲೂರು ತಾಲ್ಲೂಕಿನ ಬೆಸ್ಕಾಂ ಕಛೇರಿಯಲ್ಲಿ ದಿನಗೂಲಿ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದ ನೌಕರನು ಆಕಸ್ಮಿಕ ಮರಣ ಹೊಂದಿದ್ದು ಇವರ ಕುಟುಂಬಕ್ಕೆ ಪರಿಹಾರ ನೀಡುವ ಬಗ್ಗೆ ಮಾನ್ಯ ಇಂಧನ ಸಚಿವರ ಗಮನ ಸೆಳೆಯುತ್ತಿದ್ದೇನೆ.

ಶ್ರೀ ಡಿ.ಕೆ. ಶಿವಕುಮಾರ್ (ಮಾನ್ಯ ಇಂಧನ ಸಚಿವರು):– ಮಾನ್ಯ ಅಧ್ಯಕ್ಷರೆ,

ಮಾಲೂರು ತಾಲ್ಲೂಕಿನ ಬೆಸ್ಕಾಂ ಕಛೇರಿಯಲ್ಲಿ ಶ್ರೀ ವಿನೋದ ಕುಮಾರ್ ರವರು ಮೆ: ಗೋಲ್ಡನ್ ಸೆಕ್ಯೂರಿಟಿ ಏಜೆನ್ಸಿಸ್ ಮೂಲಕ ಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿದ್ದು, ದಿನಾಂಕ: 03.06.2014 ರಂದು ಶ್ರೀ ಬಾಲಕೃಷ್ಣ ಎಂಬ ಲೈನ್‌ಮೆನ್ ಜೊತೆ 11 ಕೆ.ವಿ ಮಾರ್ಗದ ರಿಪೇರಿ ಕೆಲಸದಲ್ಲಿ ತೊಡಗಿದ್ದಾಗ, ಮಾರಣಾಂತಿಕವಲ್ಲದ ವಿದ್ಯುತ್ ಅಪಘಾತ ಸಂಭವಿಸಿರುತ್ತದೆ.

ಶ್ರೀ ವಿನೋದ ಕುಮಾರ್ ರವರು ದಿನಾಂಕ: 10.06.2014 ರಂದು ಬೆಂಗಳೂರಿನ ಉದ್ಭವ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿರುತ್ತಾರೆ. ಶ್ರೀ ವಿನೋದ ಕುಮಾರ್ ರವರು ಬೆ.ವಿ.ಕಂ.ನಿಂದ ದಿನಗೂಲಿ ಆಧಾರದ ಮೇಲೆ ನೇಮಕಗೊಂಡಿಲ್ಲವಾದ್ದರಿಂದ ಬೆಸ್ಕಾಂ ವತಿಯಿಂದ ಯಾವುದೇ ಪರಿಹಾರ ನೀಡಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ. ಸದರಿಯವರನ್ನು ನೇಮಕ ಮಾಡಿಕೊಂಡ ಮೆ: ಗೋಲ್ಡನ್ ಸೆಕ್ಯೂರಿಟಿ ಏಜೆನ್ಸಿಸ್ ರವರು ಮೃತ ಕಾರ್ಮಿಕನಿಗೆ ನಿಯಮಾನುಸಾರ ಪರಿಹಾರವನ್ನು ನೀಡಬೇಕಿರುತ್ತದೆ.

ಮೆ: ಗೋಲ್ಡನ್ ಸೆಕ್ಯುರಿಟಿ ಏಜೆನ್ಸಿ ಯವರು ಈಗಾಗಲೇ ಮೃತ ಕುಟುಂಬಕ್ಕೆ ತಾತ್ಕಲಿಕ ಪರಿಹಾರವಾಗಿ ` 1,00,000/– ಗಳನ್ನು ದಿನಾಂಕ: 26.06.2014 ರಂದು ನೀಡಿರುತ್ತಾರೆ ಹಾಗೂ ಅಪಘಾತಕ್ಕೀಡಾದ ಮೃತ ವ್ಯಕ್ತಿಗೆ ಬರಬಹುದಾದ ಮಿಮೆ ಮೊತ್ತವು ವಿಮಾ ಕಂಪನಿಯಿಂದ ಮಂಜೂರಾದ ನಂತರ ಸದರಿ ವಿಮೆಯ ಮೊತ್ತವನ್ನು ಮೃತ ವ್ಯಕ್ತಿಯ ಕುಟುಂಬಕ್ಕೆ ನೀಡುವುದಾಗಿ ಮೆ: ಗೋಲ್ಡನ್ ಸೆಕ್ಯುರಿಟಿ ಏಜೆನ್ಸಿಸ್ ರವರು ಮೌಖಿಕವಾಗಿ ಒಪ್ಪಿರುತ್ತಾರೆ.

ಶ್ರೀ ಕೆ.ಎಸ್. ಮಂಜುನಾಥಗೌಡ:– ಮಾನ್ಯ ಅಧ್ಯಕ್ಷರೆ, ವಿನೋದ್ ಕುಮಾರ್ ಎಂಬ 25 ವರ್ಷದ ಹುಡುಗ ವಿದ್ಯುತ್ ಸ್ಪರ್ಶವಾಗಿ ಸಾವಿಗಿಡಾಗಿರುತ್ತಾನೆ. ಇದು ಒಂದು security agency underನಲ್ಲಿ contract basis ಮೇಲೆ work ಮಾಡುತ್ತಿರುವುದರಿಂದ ಬೆಸ್ಕಾಂ ವತಿಯಿಂದ ದುಡ್ಡು ಕೊಡುವುದಕ್ಕೆ ಬರುವುದಿಲ್ಲವೆಂದು ಉತ್ತರವನ್ನು ಮಾನ್ಯ ಸಚಿವರು ಕೊಟ್ಟಿದ್ದಾರೆ. Contract basis ಮೇಲೆ work ಮಾಡುವುದಾದರೆ 11 ಕೆ.ವಿ. ಕಂಬದ ಮೇಲೆ ಹತ್ತಿಸುವುದಕ್ಕೆ ಬರುವುದಿಲ್ಲ. ನಮ್ಮ ಲೈನ್‌ಮನ್‌ಗಳು ಅವನನ್ನು ಕಂಬದ ಮೇಲೆ ಹತ್ತಿಸಿದ್ದಾರೆ. ಅವನು ಮೇಲೆ ಇದ್ದಾಗ ನಮ್ಮ ಬೆಸ್ಕಾಂರವರು ಕರೆಂಟ್ ಅನ್ನು charge ಮಾಡಿರುವವರು ಮಾಡಿದ್ದಾರೆ. ಅವನಿಗೆ 25 ವರ್ಷ ವಯಸ್ಸಾಗಿದ್ದು ತೀರಿಕೊಂಡಿದ್ದಾನೆ. ಅವರಿಗೆ ಮಕ್ಕಳು ಯಾರೂ ಇಲ್ಲ. ಮಾನವೀಯತೆಯ ದೃಷ್ಟಿಯಿಂದ ಪರಿಹಾರ ಕೊಡಿಸಬೇಕು. ಈ ಪಾಲಿಸಿಯು Forest Departmentನಲ್ಲಿ ಇದೆ. ಅಲ್ಲಿ ಸತ್ತುಹೋದರೆ 5 ಲಕ್ಷ ಪರಿಹಾರಧನವನ್ನು ಕೊಡುತ್ತಾರೆ. ಅವರು ನಮ್ಮ ಕೆಲಸವನ್ನು ಮಾಡುವುದಕ್ಕಾಗಿ ಬಂದಿದ್ದಾರೆ. ತಾವು contract basis ಮೇಲೆ ಅವರನ್ನು ತೆಗೆದುಕೊಂಡಿರುವುದರಿಂದ ಅವರನ್ನು ಕಂಬದ ಮೇಲೆ ಹತ್ತಿಸುವುದಕ್ಕೆ ಬರುವುದಿಲ್ಲ. ಆದರೂ ಕಂಬದ ಮೇಲೆ ಹತ್ತಿಸಿದ್ದಾರೆ.

ಅಧ್ಯಕ್ಷರು:– ಮಾನ್ಯ ಸಚಿವರೆ, ಉತ್ತರ ಕೊಡಿ.

ಶ್ರೀ ಡಿ.ಕೆ. ಶಿವಕುಮಾರ್ (ಮಾನ್ಯ ಇಂಧನ ಸಚಿವರು):– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಏನು ಕೇಳಿದ್ದಾರೆ, ಲೈನ್‌ಮನ್ ದಿನಗೂಲಿ ಆಧಾರದ ಮೇಲೆ ಬೆಸ್ಕಾಂ ಕಛೇರಿಯಿಂದ ತೆಗೆದುಕೊಂಡಿದ್ದಾರೆ. ಆತನು ಲೈನ್ ಅನ್ನು ಸರಿಮಾಡುವ ದೃಷ್ಟಿಯಿಂದ ಕಂಬಕ್ಕೆ ಹತ್ತಿ ಹೆಚ್ಚು ಕಡಿಮೆ ಆಗಿದೆ. ಇದಕ್ಕೆ ಪರಿಹಾರ ಕೊಡಬೇಕೆಂದು ಹೇಳಿದ್ದಾರೆ. ಸರ್ಕಾರದಲ್ಲಿ ಕೆಲವೊಂದು procedureಗಳು ಇವೆ. ಅವರು ನಮ್ಮ employee ಅಲ್ಲ. ಅವನನ್ನು contract basis ನಲ್ಲಿ ತೆಗೆದುಕೊಂಡು ಕೆಲಸವನ್ನು ಮಾಡುತ್ತಿದ್ದಾರೆ. ಯಾವುದೋ ಏಜೆನ್ಸಿಯವರು ಕೆಲಸ ಮಾಡಿಸಿದ್ದಾರೆ. ಇನ್ನೊಂದು, ಇಲ್ಲಿ ಮಾನವೀಯತೆಯ ಪ್ರಶ್ನೆ ಇದೆ. ಈಗಾಗಲೇ ಒಂದು ಲಕ್ಷ ರೂಪಾಯಿಗಳ ಪರಿಹಾರದ ಹಣವನ್ನು ಏಜೆನ್ಸಿ ಮುಖಾಂತರವಾಗಿ ಕೊಟ್ಟಿದ್ದೇವೆ.

ಶ್ರೀ ಕೆ.ಜಿ. ಬೋಪಯ್ಯ:– ಇದು ಹೇಗೆ ಆಗುತ್ತದೆ?

ಶ್ರೀ ಕೆ.ಎಸ್. ಮಂಜುನಾಥಗೌಡ:– ನಮ್ಮ ತಪ್ಪನ್ನು ಇಟ್ಟುಕೊಂಡು ನಾವು ದುಡ್ಡನ್ನು ಕೊಡಲಿಲ್ಲವೆಂದರೆ ಹೇಗೆ?

ಶ್ರೀ ಡಿ.ಕೆ. ಶಿವಕುಮಾರ್ (ಮಾನ್ಯ ಇಂಧನ ಸಚಿವರು):– ಆ ವ್ಯಕ್ತಿ contract basis ಮೇಲೆ ಕೆಲಸ ಮಾಡುತ್ತಿದ್ದ. Contract basis ಮೇಲೆ ಕೆಲಸ ಮಾಡಬೇಕಾದರೆ ಲೈನ್ ಮೇಲೆ ಹತ್ತಿಸಲೇಬೇಕಾಗುತ್ತದೆ, ಮತ್ತೊಂದನ್ನು ಮಾಡಲೇಬೇಕಾಗುತ್ತದೆ, ನಾನು ಇಲ್ಲವೆಂದು ಹೇಳುತ್ತಿಲ್ಲ. ಈಗಾಗಲೇ ಏಜೆನ್ಸಿ ಮುಖಾಂತರ ಒಂದು ಲಕ್ಷ ಪರಿಹಾರವನ್ನು ಕೊಡಿಸಿದ್ದೇವೆ. ತಾವು ಈ ಬಗ್ಗೆ ನಮ್ಮ ಗಮನ ಸೆಳೆದಿದ್ದೀರಿ. ಈ ಬಗ್ಗೆ ನಾವು ಸಹಾನುಭೂತಿಯಿಂದ ನೋಡಿ ಮತ್ತೆ ಅಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡಿ ಇನ್ನೂ ಸ್ವಲ್ಪ ಸಹಾಯ ಮಾಡುವುದಕ್ಕೆ ಖಂಡಿತ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು:– ಆಯಿತು. ಶ್ರೀ ಸಿ.ಟಿ. ರವಿ ಮತ್ತು ಶ್ರೀ ಡಿ.ಎನ್. ಜೀವರಾಜ್‌ರವರೆ, ತಾವು ಗಮನಸೆಳೆಯಿರಿ.